ಮೊರಾರ್ಜಿ ದೇಸಾಯಿ ವಸತಿ ನಿಲಯ

4740 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *2000-2001ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಹೊಸದಾಗಿ ಮಂಜೂರಾಗಿರುವ ಪೋಸ್ಟ್ ಮೆಟ್ರಿಕ್ ಮತ್ತು ಪ್ರಿ ಮೆಟ್ರಿಕ್ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ವಸತಿ ನಿಲಯಗಳ ಸಂಖ್ಯೆ ಎಷ್ಟು?*

2) *ಅದೇ ರೀತಿ ಹಿಂದುಳಿದ ವರ್ಗಗಳಿಗೆ ಆ ಆರ್ಥಿಕ ವರ್ಷದಲ್ಲಿ ಮಂಜೂರಾಗಿರುವ ಪೋಸ್ಟ್ ಮೆಟ್ರಿಕ್ ಮತ್ತು ಪ್ರಿ ಮೆಟ್ರಿಕ್ ವಸತಿ ನಿಲಯಗಳ ಸಂಖ್ಯೆ ಎಷ್ಟು?*

3) *ಹೊಸದಾಗಿ ಕಟ್ಟಡ ನಿರ್ಮಾಣ ಮಾಡಲು ಎಷ್ಟು ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ? ಇದಕ್ಕೆ ತೊಡಗಿಸಿರುವ ಹಣ ಎಷ್ಟು?*

4) *ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು? ಎಷ್ಟು ಸ್ವಂತ ಕಟ್ಟಡಗಳಲ್ಲಿ ವಸತಿ ಶಾಲೆಗಳು ನಡೆಯುತ್ತಿವೆ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 2000-01ನೇ ಸಾಲಿನಲ್ಲಿ ಮಂಜೂರಾಗಿರುವ ವಿದ್ಯಾರ್ಥಿನಿಲಯಗಳ ವಿವರ :

		ಮೆಟ್ರಿಕ್‌ಪೂರ್ವ	ಮೆಟ್ರಿಕ್ ನಂತರ
1.	ಪರಿಶಿಷ್ಟ ಜಾತಿ	25	25
2.	ಪರಿಶಿಷ್ಟ ವರ್ಗ	5	-

2) 2000-01ನೇ ಸಾಲಿನ ಆರ್ಥಿಕ ವರ್ಷದಲ್ಲಿ 3 ಮೆಟ್ರಿಕ್ ಪೂರ್ವ ಹಾಗೂ 21 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮಂಜೂರಾಗಿರುತ್ತವೆ.

3)	*ಮಾಡಿರುವ ಸ್ಥಳಗಳ ಸಂಖ್ಯೆ*		*ಒದಗಿಸಿರುವ ಹಣ (ಲಕ್ಷ ರೂ.ಗಳಲ್ಲಿ)*
	ಸಮಾಜ ಕಲ್ಯಾಣ	108	2790.00
	ಪರಿಶಿಷ್ಟ ವರ್ಗಗಳ ಕಲ್ಯಾಣ	15	91.00
	ಹಿಂದುಳಿದ ವರ್ಗಗಳ ಇಲಾಖೆ	15	453.50

4) ಮೂರಾರ್ಜಿದೇಸಾಯಿ ವಸತಿ ಶಾಲೆಗಳ ವಿವರ :

	ಒಟ್ಟು ವಸತಿ ನಿಲಯಗಳು	*ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿ ನಿಲಯಗಳು*
ಪರಿಶಿಷ್ಟ ಜಾತಿ	47	3
ಹಿಂದುಳಿದ ವರ್ಗ	14	-
ಅಲ್ಪ ಸಂಖ್ಯಾತರು	4	-